ಅಸಲು ದಾವಾ ಸಂಖ್ಯೆ - 184/2015
ಪಿಡಬ್ಲ್ಯೂ - 01
ದಿನಾಂಕಃ 04-03-2026
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಸಿ ಬಿ ಪಿ ವಕೀಲರಿಂದಃ</u>

ನಾನು ಈ ಕೆಳಕಂಡ ದಸ್ತಾವೇಜುಗಳನ್ನು ಹಾಜರು ಪಡಿಸಿದ್ದೇನೆ.

ದಿಃ 07-02-2020 ರಂದು ಕೆ ಎ ಟಿ ಬೆಂಗಳೂರು ರವರು ಮೇಲ್ಮನವಿ 678/2014 ರಲ್ಲಿ ಹೊರಡಿಸಿದ ಆದೇಶದ ದೃಡಿಕೃತ ನಕಲಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 11 ಎಂದು ಗುರುತಿಸಲಾಯಿತು.

ದಿಃ 30-01-2023 ರಂದು ಎ ಸಿ ಸವಣೂರ ರವರು ನಂಬರ 2-2020/2021 ರಲ್ಲಿ ಹೊರಡಿಸಿದ ಆದೇಶದ ದೃಡಿಕೃತ ನಕಲಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 12 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಕೋರಿಕೊಂಡಂತೆ ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ ಬಿ ಟಿ ವಕೀಲರಿಂದಃ</u>

ಈ ದಾಖಲೆಗಳ ಪ್ರಕಾರ ನಿಮ್ಮ ಹೆಸರು ಉತಾರಗಳಲ್ಲಿ ಎಷ್ಟು ವರ್ಷದ ಹಿಂದೆ ಕಡಿಮೆ ಆಗಿರುತ್ತದೆ ಎಂದರೆ ನನಗೆ ನೆನೆಪಿಲ್ಲ. ನೀವು ಈ ಪ್ರಸ್ತುತ ದಾವೆಯನ್ನು ಹೊರತುಪಡಿಸಿ, ಪ್ರತಿವಾದಿಯರ ವಿರುದ್ಧ ಬೇರೆ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ರೀತಿಯ ದಾವೆ ಹೂಡಿರುವುದಿಲ್ಲ ಎಂದರೆ ಸರಿ. ನೀವು ಸಲ್ಲಿಸಿದ ಪ್ರಕರಣದ ದಾಖಲೆಗಳಲ್ಲಿ ನೀವು ಈ ಪ್ರತಿವಾದಿಯರ ವಿರುದ್ಧ ಪ್ರಕರಣ ಹೂಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ಪರಿಹಾರ ಕೋರಿ ಪ್ರಕರಣ ಹೂಡಿದ್ದೀರಿ ಎಂದರೆ ಅವರು ನಮ್ಮ ಜಾಗ ಅತೀಕ್ರಮಣ ಮಾಡಿದ ಬಗ್ಗೆ ಹೂಡಿರುತ್ತೇನೆ. ಪ್ರತಿವಾದಿಯರು ಒಟ್ಟು ಎಷ್ಟು ಜಾಗವನ್ನು ಅತೀಕ್ರಮಣ ಮಾಡಿದ್ದಾರೆ ಎಂದರೆ ನಾಲ್ಕುವರೆ ಗುಂಟೆ ಮಾಡಿದ್ದಾರೆ. ಅಂದಾಜು ಎಷ್ಟು ವರ್ಷದ ಹಿಂದೆ ಅೀತಿಕ್ರಮಣ ಮಾಡಿದ್ದಾರೆ ಎಂದರೆ ಸುಮಾರು 4-5 ವರ್ಷದ ಹಿಂದೆ ಮಾಡಿದ್ದಾರೆ. ಸದರಿ ಒತ್ತುವರಿ ಮಾಡಿದ ಜಾಗವನ್ನು ತೆರವು ಗೊಳಿಸಿ ಪರಿಹಾರ ಕೇಳಿ ಯಾವುದಾದರೂ ದಾವೆ ಮಾಡಿದ್ದೀರಾ ಎಂದರೆ ಈ ದಾವೆಯನ್ನು ಮಾಡಿದ್ದೇನೆ. ಈ ದಾವೆಯನ್ನು ನೀವು ಜಾಗವನ್ನು ತೆರವುಗೊಳಿಸಿ ಎಂದು ಕೇಳಿರುವುದಿಲ್ಲ, ನೀವು ಕಬ್ಜಾದಲ್ಲಿ ಇದ್ದೀರಿ ಎಂದು ಕೇಳಿರುತ್ತೀರಿ ಎಂದರೆ ನಾವೇ ಕಬ್ಜೆಯಲ್ಲಿ ಇರುತ್ತೇವೆ ಎಂದು

ನುಡಿಯುತ್ತಾರೆ. ಈ ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>**ಮರು ವಿಚಾರಣೆಃ ಇಲ್ಲ.**</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಆದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು